148ನೇ ಅಧಿವೇಶನ
ನಿ-72
ಕ್ರ-173 / 174 - ಕಂಪ್ಯೂಟರ್
1+1=2

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 72 ರಡಿ(173) ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೆಚ್.ಬಿ.ಆರ್. ಲೇಔಟ್‌ನ 1ನೇ ಹಂತದ 5ನೇ ಬ್ಲಾಕ್‌ನ ನಿವೇಶನ ಸಂಖ್ಯೆ: 628 (ಪೂರ್ವ-ಪಶ್ಚಿಮ 12.60ಮೀ * 11.50+12.50/2 ಮೀ) ಅನ್ನು ಶ್ರೀಮತಿ ರೀನಾ ಜೋಸೆಫ್, ನಂ.123/3, ಚರ್ಚ್ ಸ್ಟ್ರೀಟ್, ಲಿಂಗರಾಜಪುರ, ಬೆಂ-04, ರವರಿಗೆ ಹರಾಜು ಪ್ರಕ್ರಿಯೆಯಲ್ಲಿ ಅಲಾಟ್ ಮಾಡಿ, ಸದರಿಯವರಿಗೆ ಹರಾಜು ನಿವೇಶನದ ಸ್ಥಿರೀಕರಣ ಪತ್ರ, ಹರಾಜು ನಿವೇಶನದ ಸ್ವಾಧೀನ ಪತ್ರ, ಹರಾಜು ಮಾರಾಟ ಕ್ರಯಪತ್ರವನ್ನು ದಿನಾಂಕ: 20/01/2004 ರಂದು ನೋಂದಾಯಿಸಿಕೊಂಡು ಎಲ್ಲಾ ದಾಖಲಾತಿಗಳನ್ನು ಪರಿಪೂರ್ಣಗೊಳಿಸಿಕೊಂಡಿದ್ದರೂ, ಸದರಿ ನಿವೇಶನದಲ್ಲಿ ಅಪರಿಚಿತ ವ್ಯಕ್ತಿಯ ಅಕ್ರಮ ಪ್ರವೇಶದ ಬಗ್ಗೆ ದಿನಾಂಕ:22/02/2022 ರಂದು ಕೆ.ಜಿ.ಹಳ್ಳಿಯ ಗೋವಿಂದಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ, ಈವರೆವಿಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

**ಉತ್ತರ:** ಶ್ರೀಮತಿ ರೀನಾಜೋಸೆಫ್ ರವರು ದಿನಾಂಕ:05-11-2002 ರಂದು 5ನೇ ಬ್ಲಾಕ್, 1ನೇ ಹಂತ, ಹೆಚ್.ಬಿ.ಆರ್. ಲೇಔಟ್, ಸೈಟ್ ನಂ.628 ಮತ್ತು 612 ಗಳನ್ನು ಬಿ.ಡಿ.ಎ. ಹರಾಜಿನಲ್ಲಿ ಖರೀದಿ ಮಾಡಿರುತ್ತಾರೆ. ನಂತರ, ಪಿರ್ಯಾದುದಾರರು ಯುನೈಟೆಡ್ ಕಿಂಗ್‌ಡಮ್ ದೇಶದಲ್ಲಿ ವಾಸವಾಗಿದ್ದು, ಪಿರ್ಯಾದುದಾರರ ತಂದೆಯವರಾದ ಶ್ರೀ ಎ ಪಾಪಣ್ಣ ರವರು ಪ್ರತಿ ತಿಂಗಳಿಗೊಮ್ಮೆ ಸೈಟ್ ಹತ್ತಿರ ಹೋಗಿ ನೋಡಿಕೊಂಡು ಬರುತ್ತಿದ್ದು. ಆದರೆ 2019 ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ಪಿರ್ಯಾದುದಾರರ ತಂದೆಯವರು ಸೈಟ್ ನಂ-628ಕ್ಕೆ ಭೇಟಿ ನೀಡಿದಾಗ ಯಾರೋ ಸದರಿ ಸೈಟ್‌ನಲ್ಲಿ ಅಕ್ರಮ ಪ್ರವೇಶ ಮಾಡಿ ಕಾನೂನು ಬಾಹಿರವಾಗಿ ಕಟ್ಟಡ ಕಟ್ಟಿದ್ದು, ಈ ಬಗ್ಗೆ ಕೆ.ಜಿ.ಹಳ್ಳಿ ಪೊಲೀಸ್ ಠಾಣೆ ಹಾಗೂ ಬಿ.ಡಿ.ಎ.ನಲ್ಲಿ ದೂರು ದಾಖಲಿಸಿದ್ದು, ನಂತರ ಪಿರ್ಯಾದುದಾರರು ಕೋವಿಡ್ ಇರುವುದರಿಂದ ಭಾರತಕ್ಕೆ ವಾಪಸ್ ಬರಲು ಆಗದೇ ಇದ್ದು, ನಂತರ ಪಿರ್ಯಾದುದಾರರು ಭಾರತಕ್ಕೆ ವಾಪಸ್ ಬಂದು ತಮ್ಮ ಸೈಟ್‌ನಲ್ಲಿ ನೋಡಲಾಗಿ ಯಾರೋ ಅಪರಿಚಿತರು ಪಿರ್ಯಾದುದಾರರ ಸೈಟ್‌ನಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ಕಾನೂನು ಬಾಹಿರವಾಗಿ 5 ಅಂತಸ್ತಿನ ಬಿಲ್ಡಿಂಗ್ ಮತ್ತು ಶಾಪ್‌ಗಳನ್ನು ನಿರ್ಮಿಸಿರುತ್ತಾರೆ. ಈ ಬಗ್ಗೆ ಪಿರ್ಯಾದುದಾರರು ಖುದ್ದು ಬಿ.ಡಿ.ಎ. ಕಛೇರಿಗೆ ಭೇಟಿ ನೀಡಿ ದೂರು ನೀಡಿದ್ದು, ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ತಮ್ಮ ಸೈಟ್ ನಂ.628 ರಲ್ಲಿ ಯಾರೋ ಅಕ್ರಮವಾಗಿ ಪ್ರವೇಶ ಮಾಡಿ ಕಾನೂನು ಬಾಹಿರವಾಗಿ 5 ಅಂತಸ್ತಿನ ಬಿಲ್ಡಿಂಗ್ ಮತ್ತು ಶಾಪ್‌ಗಳನ್ನು ನಿರ್ಮಿಸಿ ಮೋಸ ಮಾಡಿರುತ್ತಾರೆಂದು ನೀಡಿದ ದೂರನ್ನು ಸ್ವೀಕರಿಸಿ, ಗೋವಿಂದಪುರ ಪೊಲೀಸ್ ಠಾಣಾ ಮೊ.ಸಂ.33/2022 ಕಲಂ.419, 420, 448 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತದೆ.

ಈಗಾಗಲೇ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಆರೋಪಿತರು ಜಾಮೀನಿನ ಮೇಲಿರುತ್ತಾರೆ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನು ಹೆಚ್ಚಿನ ಸಾಕ್ಷ್ಯಾಧಾರಗಳನ್ನು ಹಾಗೂ ಸೂಕ್ತ ದಾಖಲಾತಿಗಳನ್ನು ಸಂಗ್ರಹಿಸುವುದು ಬಾಕಿ ಇರುತ್ತದೆ. ಆದ್ದರಿಂದ ಈ ಬಗ್ಗೆ ಕೂಲಂಕಷವಾಗಿ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುವುದು.

ಹೆಚ್‌ಡಿ 16 ಎಸ್‌ಎಸ್‌ಟಿ 2023

**(ಆರಗ ಜ್ಞಾನೇಂದ್ರ)**
ಮಾನ್ಯ ಗೃಹ ಸಚಿವರು